Rotary

# JASMINE

ಜಾಸ್ಮಿನ್ जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President




**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 | Issue - 16 | 17th October 2024

ವಿಷಯ :

**ರತನ್ ಟಾಟಾ ಒಂದು ಯಶೋಗಾಥೆ**

ಮುಖ್ಯ ಅತಿಥಿ:

**ಜಯಶೀಲ್ ಕುಮಾರ್**

ಉಪ ಪ್ರಾಂಶುಪಾಲರು

**IMJISC, ಮೂಡಲಕಟ್ಟೆ**

**Time : 7.00 p.m.**

**Venue : Hotel Shivaprasad Grand, Kundapura**

**39th year of Service and Fellowship**

We meet every Thursday at 7-30 p.m. at Sarojini Madhusoodhan D. Kushe Rotary South Hall, Kundapura

# ವಾರದ ಸಭೆಯ ವರದಿ












ತಾರೀಕು 10–10–2024ರ ಗುರುವಾರ ನಮ್ಮ ಕ್ಲಬ್ಬಿನ ಸಾಪ್ತಾಹಿಕ ಸಭೆಯು ಹೋಟೆಲ್ ಶಿವಪ್ರಸಾದ್‌ನ ಸಭಾಂಗಣದಲ್ಲಿ ನಡೆಯಿತು. 'ಸಮುದಾಯ ಆರೋಗ್ಯ ಮತ್ತು ನಾವು' ಎನ್ನುವ ವಿಚಾರದ ಬಗ್ಗೆ ತಮ್ಮ ಕಾಳಜಿಯನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಅತಿಥಿಯಾಗಿ ಹಟ್ಟಿಯಂಗಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ. ವೈ. ರಂಗನಾಥ್‌ರವರು ಆಗಮಿಸಿದ್ದರು. ಅತಿಥಿಗಳನ್ನು, ನಮ್ಮ ಸದಸ್ಯರನ್ನು ಮತ್ತು ಇನ್ನರ್‌ವೀಲ್ ಸದಸ್ಯೆಯರನ್ನು ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಆತ್ಮೀಯವಾಗಿ ಸ್ವಾಗತಿಸಿದರು. ಇನ್ನರ್‌ವ್ಹೀಲ್ ಸದಸ್ಯೆ ಆ್ಯನ್ ಶಾಂತಾ ಕಾಂಚನ್‌ರವರು ಮಧುರವಾದ ಪ್ರಾರ್ಥನೆಯೊಂದಿಗೆ ಸಭೆಗೆ ಚಾಲನೆಯನ್ನು ನೀಡಿದರು. ಜೊತೆ ಕಾರ್ಯದರ್ಶಿ ರೊ. ಸಚಿನ್ ನಕ್ಕತ್ತಾಯರವರು ಕಳೆದ ವಾರದ ವರದಿಯನ್ನು ಸಭೆಗೆ ತಿಳಿಸಿದರು. ವಾರದ ಚಿಂತನೆಯನ್ನು ನೀಡಿದ ರೊ. ವಿವಿಯನ್ ಕ್ರಾಸ್ತಾರವರು ನಾವು ಮಾಡಿದ ಕಾರ್ಯಗಳನ್ನು ಯಾರೂ ಗುರುತಿಸದಿದ್ದರೂ ಸಮಾಜಕ್ಕಾಗಿ ನಾವು ಸತ್ಕಾರ್ಯಗಳನ್ನು ಮಾಡಲೇಬೇಕು. ಇಂತಹ ಗುಣಗಳಿಗಾಗಿ ನಾವು ಪ್ರಕೃತಿಯನ್ನು ಗಮನಿಸಿದರೆ ಮರ ಗಿಡಗಳೂ ನಮಗೆ ಪ್ರೇರಣೆಯನ್ನು ನೀಡುತ್ತವೆ" ಎಂದರು. ರೋಟರಿ ಮಾಹಿತಿ ನೀಡಿದ ರೊ. ಸಚಿನ್ ನಕ್ಕತ್ತಾಯರವರು " ರಷ್ಯಾ ಮತ್ತು ಉಕ್ರೇನಿನ ಮಧ್ಯೆ ನಡೆಯುತ್ತಿರುವ ಯುದ್ಧದಿಂದಾಗಿ ತಂದೆ, ತಾಯಿ, ಕುಟುಂಬವನ್ನು ಕಳೆದುಕೊಂಡ ಅನಾಥ ಮಕ್ಕಳಿಗೆ ಇದೀಗ ರೋಟರಿ ಇಂಟರ್‌ನ್ಯಾಶನಲ್‌ರವರು ಆಹಾರ, ಆರೈಕೆ, ಆಶ್ರಯ ಮತ್ತು ಶಿಕ್ಷಣವನ್ನು ನೀಡಲು ಪ್ರಾರಂಭಿಸಿದೆ." ಎನ್ನುವ ಮಹತ್ತರ ಮಾಹಿತಿಯನ್ನು ನೀಡಿದರು. ಇಂದು ನಮ್ಮ ಸಭೆಗೆ ಅತಿಥಿಗಳಾಗಿ ಆಗಮಿಸಿದ್ದ ಯುವ ವೈದ್ಯಾಧಿಕಾರಿ ಡಾ. ವೈ. ಪಿ. ರಂಗನಾಥ್‌ರವರನ್ನು ಸಭೆಗೆ ಪರಿಚಯಿಸಿದ ರೊ. ದೋ. ಮ. ಚಂದ್ರಶೇಖರ್‌ರವರು ಡಾ. ರಂಗನಾಥ್‌ರವರು ಗೋಳಿಯಂಗಡಿಯ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪ್ರಾರಂಭಿಸಿ, ಮುಂದೆ CET ಯಲ್ಲಿ 130ನೇ ರ್‍ಯಾಂಕ್ ಪಡೆದು ಇಂದು ವೈದ್ಯಾಧಿಕಾರಿಯಾಗಿ ಬೆಳೆದುದಕ್ಕಾಗಿ ರೋಟರಿಯ ಪರವಾಗಿ ಅವರನ್ನು ಅಭಿನಂದಿಸಿದರು. ಮುಂದೆ ಸಭೆಯನ್ನುದ್ದೇಶಿಸಿ ಮಾತನಾಡಿದ ಡಾ. ರಂಗನಾಥರವರು – "ಭಾರತದ ಗ್ರಾಮೀಣ ವಲಯದ ಜನ ಸಮುದಾಯದಲ್ಲಿ ಕಾಡುತ್ತಿರುವ ಆರೋಗ್ಯ ಸಮಸ್ಯೆಗಳಿಗೆ ಆಹಾರ ಮತ್ತು ದೇಹದ ಬಗೆಗಿನ ತಿಳುವಳಿಕೆಯ ಕೊರತೆಗಳು ಹಾಗೂ ಸ್ವಯಂಕೃತ ನಿರ್ಲಕ್ಷ್ಯಗಳು ಕಾರಣ" ಎಂದು ಅಭಿಪ್ರಾಯ ಪಟ್ಟರು. "ವಿದೇಶಗಳಲ್ಲಿ ಜನ ಸಾಮಾನ್ಯರಿಗೆ ವೈದ್ಯಕೀಯ ಸೇವೆಗಳು ತ್ವರಿತವಾಗಿ ಲಭ್ಯವಾಗದಿದ್ದರೂ ಅವರ ಆರೋಗ್ಯವಂತ ದೇಹ ಪ್ರಕೃತಿಯು ಅವರನ್ನು ಜೀವಂತವಾಗಿಡುತ್ತದೆ. ಆದರೆ ಭಾರತದಲ್ಲಿ ವೈದ್ಯರು ಮತ್ತು ವೈದ್ಯಕೀಯ ವ್ಯವಸ್ಥೆಗಳು ಪ್ರತಿಯೊಂದು ವಿಚಾರಕ್ಕೂ ತ್ವರಿತವಾಗಿ ಲಭ್ಯವಾಗುತ್ತಿದ್ದರೂ ಮರಣ ಪ್ರಮಾಣ ಹೆಚ್ಚುತ್ತಿರುವುದಕ್ಕೆ ಎಲ್ಲರ ದೇಹ ಪ್ರಕೃತಿಗಳು ದುರ್ಬಲವಿರುವುದೇ ಸಾಕ್ಷಿ ಎಂದರು. ಈಗ ಸರಕಾರಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮುಖಾಂತರ ತಳ ಸಮುದಾಯಗಳ ಜನರ ಆರೋಗ್ಯ ಕಾಳಜಿಗೋಸ್ಕರ ಹಲವು ಯೋಜನೆಗಳನ್ನು ಹಾಕಿ ಶ್ರಮಿಸುತ್ತಿದೆ. ನಾವು ವೈದ್ಯರುಗಳು 9 ಯೋಜನೆಗಳ ಮೂಲಕ ಜನರನ್ನು ಮಾನಸಿಕವಾಗಿ ಆರೋಗ್ಯದ ಬಗ್ಗೆ ಜಾಗೃತಿಗೊಳಿಸಿ, ಮುಂದಿನ 15 ವರ್ಷಗಳಲ್ಲಿ ಆರೋಗ್ಯವಂತ ಸಮುದಾಯವನ್ನು ರೂಪಿಸಲು ಪ್ರಯತ್ನಿಸುತ್ತಿದ್ದೇವೆ. ಎಂದರು.

ಅಧ್ಯಕ್ಷರು ತಮ್ಮ ಮಾತಿನಲ್ಲಿ ಹಟ್ಟಿಯಂಗಡಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಇಂದು ಭೇಟಿ ನೀಡಿದರೆ ಅದು ಉನ್ನತ ಮಟ್ಟದ ಖಾಸಗಿ ಆಸ್ಪತ್ರೆಯಂತೆ ಕಂಗೊಳಿಸುವುದಲ್ಲದೇ ಅಲ್ಲಿ ಆರೈಕೆಗಾಗಿ ಬಂದಿರುವ ರೋಗಿಗಳ ಸಂಖ್ಯೆಯನ್ನು ಗಮನಿಸಿದರೆ ಅದು ಡಾ. ರಂಗನಾಥ್‌ರವರ ಕಾರ್ಯಕ್ಷಮತೆಗೆ ಮತ್ತು ಜನಪ್ರಿಯತೆಗೆ ಸಾಕ್ಷಿ ಎಂದು ಅನಿಸುತ್ತದೆ ಎಂದರಲ್ಲದೆ ಅವರು ಮುಂದೆ ಉನ್ನತ ಹುದ್ದೆ ಯನ್ನು ಅಲಂಕರಿಸುವಂತಾಗಲಿ" ಎಂದು ಆಶಿಸಿದರು. ಹಾಗೆಯೇ "ಮುಂದಿನ ದಿನಗಳಲ್ಲಿ ರೋಟರಿಯ ವಲಯ ಮತ್ತು ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಅಭ್ಯಾಸ ವರ್ಗಗಳಿಗೆ ಎಲ್ಲಾ ಸದಸ್ಯರು ಭಾಗವಹಿಸಿ, ಸಹಕರಿಸಿ" ಎಂದು ಕೋರಿದರು. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ನಗೆಹನಿಯನ್ನು ಸಿಡಿಸಿ ರಂಜಿಸಿದರು. ರೊ. ಜಾನ್ಸನ್ ಅಲ್ಮೇಡಾರವರು ಲಕ್ಕಿ ರೊಟೇರಿಯನ್ ಆಗಿ ಆರಿಸಿ ಬಂದು ಎಲ್ಲರಿಗೂ ಧನ್ಯವಾದಗಳನ್ನು ನೀಡಿದರು. ರಾಷ್ಟ್ರಗೀತೆಯನ್ನು ಸದಸ್ಯರೆಲ್ಲರೂ ಹಾಡಿದ ನಂತರ ಅಧ್ಯಕ್ಷರು ಸಭೆಯನ್ನು ಸಮಾಪ್ತಿಗೊಳಿಸಿದರು.









ದಿ12/10 ರಂದು ಚಿನ್ಮಯ್ ಆಸ್ಪತ್ರೆಯಲ್ಲಿ Hollywood spectra Laser ಉಪಕರಣವನ್ನು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ಪ್ರಮೀಳ ನಾಯಕ್ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ PDG Rtn. ಅಭಿನಂದನ್ ಶೆಟ್ಟಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ನಮ್ಮ ಕ್ಲಬ್‌ನ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾ ಹಾಗೂ ಹಲವು ಸದಸ್ಯರು ಹಾಜರಿದ್ದು, ರೊ. ಡಾ. ಉಮೇಶ್ ಪುತ್ರನ್ ಹಾಗೂ ಅವರ ತಂಡಕ್ಕೆ ಶುಭ ಹಾರೈಸಿದರು.

**ಕಲಾ ಕ್ಷೇತ್ರ ಕುಂದಾಪುರದವರ ಆಹ್ವಾನದ ಮೇರೆಗೆ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಆಯೋಜಿಸಿರುವ ಕನ್ನಡ ರಥೋತ್ಸವ ಸಪ್ತಾಹದ ಪುರಮೆರವಣಿಗೆ ಮತ್ತು ನವೆಂಬರ್ 1 ರಿಂದ 7 ನೇ ತಾರೀಕಿನವರೆಗೆ ಒಂದು ವಾರ ನಡೆಯಲಿರುವ ವಿವಿಧ ಕಾರ್ಯಕ್ರಮಗಳ ಪೂರ್ವ ಭಾವಿ ಸಭೆಯಲ್ಲಿ ಭಾಗವಹಿಸಿ, ನಮ್ಮ ಸಲಹೆ ಸೂಚನೆ ಮತ್ತು ಕ್ಲಬ್‌ನ ವತಿಯಿಂದ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದೆವು.**

## Rotary Information

Rotary always plays a vital role in building communities. Like to mention one of their projects where in victims of Russia Ukraine war. Around 26 children has been taken care of by rotary club. They have made a camp in southern part of poland where different kinds of therapies are given to rahabilitate the children and get them out from the trauma of war.

**by Sachin Nackathaya**

## ಕಳೆದ ವಾರದ ಚಿಂತನೆ

ಅಡವಿಯಲ್ಲಿ ಅರಳುವ ಹೂವಿನ ಸೌಂದರ್ಯವನ್ನು ಪ್ರಶಂಸಿಸಲು ಅಲ್ಲಿ ಯಾರೂ ಇರುವುದಿಲ್ಲ. ಅಂದ ಮಾತ್ರಕ್ಕೆ ಗಿಡಗಳು ಹೂವುಗಳನ್ನು ಅರಳಿಸುವುದನ್ನು ನಿಲ್ಲಿಸುವುದಿಲ್ಲ. ಗುರುತಿಸುವುದಕ್ಕೆ ಯಾರೂ ಇಲ್ಲವೆಂದು ಮರಗಳು ಹಣ್ಣುಗಳನ್ನು ನೀಡಲು ನಿರಾಕರಿಸುವುದಿಲ್ಲ. ಆದುದರಿಂದ ಗುರುತಿಸುವವರು ಯಾರೂ ಇಲ್ಲವೆಂದ ಮಾತ್ರಕ್ಕೆ ಸಜ್ಜನರು ಸತ್ಕಾರ್ಯಗಳನ್ನು ಮಾಡುವುದನ್ನು ನಿಲ್ಲಿಸಬಾರದು.

**ನೀಡಿದವರು : ರೊ. ವಿವಿಯನ್ ಕ್ರಾಸ್ಟೋ**

